<u>ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕಃ **28.11.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ **16** ನೇ ಪರ ಶ್ರೀ ಪಿ ಎಸ್ ವಕೀಲರಿಂದಃ</u>

ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಅಲ್ಲಎಂದರೆ ಸರಿ. ದಾವೆಯನ್ನು ಮೊದಲಿಗೆ ಒಂದನೆ ಪ್ರತಿವಾದಿ ನರಸಿಂಹಯ್ಯ ವಿರುದ್ಧ ಮಾತ್ರ ಸಲ್ಲಿಸಿದ್ದೀರಿ ಎಂದರೆ ಸರಿ. ನರಸಿಂಹಯ್ಯ ರವರು ಕಾಲವಾಧ ನಂತರ ಅವರ ವಾರಸುದಾರರು ಎಂದು ಪ್ರತಿವಾದಿ 2 ರಿಂದ 16 ರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿದ್ದೀರಿ ಎಂದರೇ ಸರಿ. ಪ್ರತಿವಾದಿ 16 ರವರು 1 ನೇ ಪ್ರತಿವಾದಿ ನರಸಿಂಹಯ್ಯ ರವರ ಮಗನೂ ಅಲ್ಲ ಮತ್ತು ಸಂಬಂಧಿಯು ಅಲ್ಲ ಎಂದರೆ ಸರಿ. ನಿಮ್ಮವಾದ ಪತ್ರದ 4 ನೆ ಪ್ಯಾರಾದಲ್ಲಿ ಸ್ವತ್ತು ಮಾರಾಟವಾಗಿದೆ ಎಂದು ಹೇಳುವ ಎಲ್ಲಾ ಮಾರಾಟಗಾರರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಪ್ರತಿವಾದಿ 16 ರವರಾದ ಜಗನ್ನಾಥರವರಿಗೆ ಮಾರಾಟ ಮಾಡಿದ್ದೇನೆ ಎಂದು ಹೇಳಿದ್ದರು ಆದ್ದರಿಂದ ಅವರನ್ನು ಪಕ್ಷಕಾರರನ್ನಾಗಿ ಮಾಡಿದ್ದೆ, ಬೇರೆ ಯಾವುದೇ ಕ್ರಯ ಪತ್ರಗಳನ್ನು ಪ್ರತಿವಾದಿ ಹಾಜರು ಪಡಿಸಿಲ್ಲ. ಪ್ರತಿವಾದಿ 16 ನ್ನು ಸೇರಿಸಿಕೊಂಡು ಬೆರೆಯವರು ಸಹ 1 ನೆ ಪ್ರತಿವಾದಿ ನರಸಿಂಹಯ್ಯವರಿಂದ ಸ್ವತ್ತನ್ನು ಖರಿದಿಸಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನರಸಿಂಹಯ್ಯ ರವರು ಪ್ರತಿವಾದಿ ಪತ್ರದಲ್ಲಿ 16 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳಿದ್ದಾರೆ.

ನಿಮ್ಮ ತಂದೆ ಚಿಕ್ಕಲಿಂಗಪ್ಪ ರವರು ಯಾವ ಯಾವ ದಾಖಲೆಗಳನ್ನು ಬರೆದುಕೊಟ್ಟಿದಾರೊ ಆ ಯಾವ ದಾಖಲೆಗೆ ನೀವು ಸಾಕ್ಷಿ ಅಲ್ಲ ಎಂದರೆ ಸರಿ. ನಿಮ್ಮ ತಂದೆಯವರು ಅವರ ಜೀವಿತಾವಧಿಯಲ್ಲಿ ಇಲ್ಲಿಯವರಗೊ ಯಾವ ಯಾವ ದಾಖಲೆಗಳನ್ನು ಯಾರು ಯಾರಿಗೆ ಬರೆದುಕೊಟ್ಟಿದ್ದರು ಎಂದು ನಿಮಗೆ ಗೊತ್ತಿಲ್ಲ ಎಂದರೆ ಗೊತ್ತಿದೆ ಎಲ್ಲವೂ ನನಗೆ ಹೇಳಿದ್ದರು. ನಿಮ್ಮ ತಂದೆಯವರು ಅವರ ಜೀವಿತಾವಧಿಯಲ್ಲಿ ಯಾವ ಯಾವ ದಾಖಲೆಗಳನ್ನು ಬರೆದುಕೊಟ್ಟಿದ್ದರು ಎಂದರೆ ದಾವಾ ಸ್ವತ್ತಿನ ಸರ್ವೆ ನಂಬರಲ್ಲಿ ಯಾವುದನ್ನು ಬರೆದುಕೊಟ್ಟಿಲ್ಲ ಬೇರೆ ಸರ್ವೆ ನಂಬರಗಳಲ್ಲಿ ಒಟ್ಟಿಗೆ 1 ನೇ ಪ್ರತಿವಾದಿ ಮತ್ತು ನಮ್ಮ ತಂದೆಯವರು ಜಂಟಿಯಾಗಿ ಕೆಲವು ಕ್ರಯ ಪತ್ರ ಮಾಡಿದ್ದರು. ನಿಮ್ಮ ತಂದೆಯವರು Power of Attorney ಕೊಟ್ಟಿದ್ದರು ಎಂದರೆ ನಮ್ಮ ತಂದೆಯವರು ಯಾವುದೇ Power of Attorney ಕೊಟ್ಟಿಲ್ಲ. ಈ ದಾವೆಯಲ್ಲಿ ನೀವು ನಿಮ್ಮ ತಂದೆಯವರ Authenticated ವಂಶವೃಕ್ಷವನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಈ ಹಿಂದೆ ರಾಜಿಯಾಗಿ ಭಾಗ ಆಗಿತ್ತು ಎಂದು ಹೇಳಿದ್ದೀರಿ ಯಾವ ಯಾವ ಸ್ವತ್ತುಗಳು ಎಂದರೆ 2004 ರಲ್ಲಿ ವಿಭಾಗ ಪತ್ರ ಮಾಡಿಕೊಂಡಿದ್ದೇವು ಅದರಲ್ಲಿ ಶೆಡ್ಯೂಲ್-ಎ ನಲ್ಲಿ ದಾವಾ ಸ್ವತ್ತು ಮತ್ತು ಉಳಿಕೆ 2 ಸರ್ವೆ ನಂಬರಗಳ ಸ್ವತ್ತುಗಳು, ಶೆಡ್ಯೂಲ್-ಬಿ ನಲ್ಲಿ ನನ್ನ ಮತ್ತು ನಮ್ಮ ತಾಯಿ ಭಾಗ್ಯಮ್ಮರವರ ಭಾಗಕ್ಕೆ ಜಂಟಿಯಾಗಿ ಬಂದ ಸ್ವತ್ತು, ಶೆಡ್ಯೂಲ್-ಸಿ ನಲ್ಲಿ 1 ನೇ ಪ್ರತಿವಾದಿ ನರಸಿಂಹಯ್ಯರವರ ಭಾಗಕ್ಕೆ ಬಂದ ಸ್ವತ್ತು, ಶೆಡ್ಯೂಲ್-ಡಿ ನಲ್ಲಿ ನನ್ನ ಮತ್ತು 1 ನೇ ಪ್ರತಿವಾದಿ

ನರಸಿಂಹಯ್ಯರವರು ಜಂಟಿಯಾಗಿ ಉಳಿಸಿಕೊಂಡಿದ್ದ ಸ್ವತ್ತು ಈ ದಾವೆಯ ದಾವಾ ಸ್ವತ್ತು. 2004 ರ ವಿಭಾಗ ಪತ್ರದಲ್ಲಿ ನಿಮ್ಮ ತಂದೆಯವರು 1 ನೇ ಪ್ರತಿವಾದಿ ನರಸಿಂಹಯ್ಯರವರಿಗೆ ಜಿ ಪಿ ಎ ಮಾಡಿಕೊಟ್ಟಿದ್ದರು ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಸ್ವತ್ತುಗಳನ್ನು ಬಿಟ್ಟು ಬೇರೆ ಯಾವ ಸ್ವತ್ತುಗಳು ಇಲ್ಲ ಎಂದರೆ ಸರಿ.

ದಾವಾ ಸ್ವತ್ತುಗಳಲ್ಲಿ ನೀವು ಸ್ವಾ ಧೀನದಲ್ಲಿ ಇಲ್ಲ ಎಂದರೆ ಹೌದು. ನೀವು ದಾವಾ ಸ್ವತ್ತುಗಳಲ್ಲಿ ದಾವಾ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿ ಇದ್ದೇನೆ ಎಂದು ತೋರಿಸಲು ಯಾವ ದಾಖಲೆಗಳನ್ನು ಹಾಜರು ಪಡಿಸಿದ್ದೀರಿ ಎಂದರೆ RTC ಗಳನ್ನು ಹಾಜರು ಪಡಿಸಿದ್ದೇನೆ. RTC ಗಳಲ್ಲಿ ನೀವು ಸ್ವಾಧೀನದಲ್ಲಿ ಇದ್ದೀರಿ ಎಂದು ತೋರಿಸಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ನರಸಿಂಹಯ್ಯರವರು ಅವರ ಜೀವಿತಾವಧಿಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ನರಸಿಂಹಯ್ಯರವರು ಅವರ ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿದ್ದೇನೆ ಅದರಲ್ಲಿ ಖರಿದಿದಾರರು ಸ್ವಾಧೀನದಲ್ಲಿ ಇದ್ದಾರೆ ಎಂದು ಅವರು ಹೇಳಿಕೊಂಡಿದ್ದಾರೆ ಎಂದರೆ ಸರಿ.

ನಿಮ್ಮ ತಂದೆಯವರು ಈ ಹಿಂದೆ ಸಲ್ಲಿಸಿರುವ OS 7084/1997 ದಾವೆ ವಜಾ ಆಗಿತ್ತು ಅದರಲ್ಲಿ ನಿಮಗೆ ಮತ್ತೆ ದಾವಾ ಸಲ್ಲಿಸಲು ಅನುಮತಿ ನೀಡಿರಲಿಲ್ಲ ಎಂದರೆ ಸರಿ. ಆ ಸ್ವತ್ತುಗಳ ಮೇಲೆ ಮತ್ತೆ ನಾನು ದಾವೆ ಸಲ್ಲಿಸಿಲ್ಲ. ಆ ದಾವೆ OS 7084/1997 ಯಲ್ಲಿ ನೀವು ಪಕ್ಷಕಾರರಾಗಿ

ಬಂದಿದ್ದೀರಿ ಎಂದರೆ ಸರಿ. ಆ ದಾವೆ OS 7084/1997 ಯಲ್ಲಿ ಸರ್ವೆ ನಂಬರ 56/1 ಎ, 55/21,56/2 ಇಷ್ಟು ಸ್ವತ್ತುಗಳು ಇವೆ ಎಂದರೆ ಸರಿ. ಪ್ರಸ್ತುತ ಈ ದಾವೆಯಲ್ಲಿ ಇರುವ 6 ಐಟಂ ಗಳಲ್ಲಿ ಸರ್ವೆ ನಂಬರ 56/1 ಎ, 55/21,56/2 ಇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು 2 ಸರ್ವೆ ನಂಬರಗಳಾದ 55/21, 56/2 OS 7084/1997 ರಲ್ಲಿ ರಾಜಿಯಾಗಿತ್ತು.

ಸುಮಾರು ಸ್ವತ್ತುಗಳನ್ನು 1 ನೇ ಪ್ರತಿವಾದಿ ನರಸಿಂಹಯ್ಯರವರು ಮಾರಾಟ ಮಾಡಿದ್ದಾರೆ ಎಂದರೆ ಅವರು ಮಾರಾಟಮಾಡಿರುವ ಯಾವ ಸ್ವತ್ತಿಗೂ ನಮಗೂ ಸಂಬಂಧ ಇಲ್ಲ ಅವುಗಳನ್ನು ಜಂಟಿಯಾಗಿರುವಾಗ ಮಾರಾಟ ಮಾಡಿದ್ದರು, ಯಾವುದೆ ಕ್ರಯ ಪತ್ರಗಳನ್ನು ಸಹ 1 ನೇ ಪ್ರತಿವಾದಿ ನರಸಿಂಹಯ್ಯರವರು ಹಾಜರು ಪಡಿಸಿಲ್ಲ. 1 ನೇ ಪ್ರತಿವಾದಿ ನರಸಿಂಹಯ್ಯರವರು ಮತ್ತು ನಿಮ್ಮ ತಂದೆಯವರು 1981 ರಲ್ಲಿ ಜಂಟಿಯಾಗಿ ಸ್ವತ್ತನ್ನು ಖರಿದಿ ಮಾಡಿರುವುದಕ್ಕೆ ನಿಮ್ಮ ತಂದೆಯವರು ಆದಾಯ ನೀಡಿರುವ ಬಗ್ಗೆ ಮತ್ತು ಖರಿದಿಸಲು ಹಣ ನೀಡಿರುವ ಬಗ್ಗೆ ಯಾವುದಾದರು ದಾಖಲೆಯನ್ನು ಹಾಜರು ಪಡಿಸಿದ್ದೀರಿ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ನಮ್ಮ ತಂದೆಯವರು ಸಹ ಹಣ ನೀಡಿದ್ದರು. ನಿಮ್ಮ ತಂದೆಯವರು ಆದಾಯ ತೆರಿಗೆದಾರರಾಗಿದ್ದರೆ ಎಂದರೆ ಇಲ್ಲ. ನಿಮ್ಮ ತಂದೆಯವರು Real Estate ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ 1 ನೇ ಪ್ರತಿವಾದಿ ನರಸಿಂಹಯ್ಯರವರ ಜೊತೆ ಮಾಡುತ್ತಿದ್ದರು. 1 ನೇ ಪ್ರತಿವಾದಿ ನರಸಿಂಹಯ್ಯರವರು 16 ಸೈಟಗಳನ್ನು 16 ನೆ ಪ್ರತಿವಾದಿ

ಜಗನ್ನಾಥರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಪ್ರತಿವಾದ ಪತ್ರದಲ್ಲಿ ಹೇಳಿದ್ದಾರೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರು ಪಡಿಸಿಲ್ಲ. 16 ನೆ ಪ್ರತಿವಾದಿ ಜಗನ್ನಾಥರವರು ಶಾಮಣ್ಣ ರವರಿಂದ ಕ್ರಯದ ಮೊಬಲಗು ಹಣವನ್ನು ಪಡೆದುಕೊಂಡು ದಾಖಲಾತಿ ಬರೆದುಕೊಟ್ಟಿದ್ದಾರೆ ಎಂದರೇ ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿ ನರಸಿಂಹಯ್ಯರವರು ಒಂದು ವಿಲ್ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಿಲ್ ಬರೆದಿರುವ ವಿಚಾರ ತಿಳಿಯದೆ 16 ನೆ ಪ್ರತಿವಾದಿ ಜಗನ್ನಾಥರವರನ್ನು ಈ ದಾವೆಯಲ್ಲಿ ಹೇಗೆ ಪಕ್ಷಕಾರರನ್ನಾಗಿ ಮಾಡಿದ್ದೀರಿ ಎಂದರೆ ಪ್ರತಿವಾದ ಪತ್ರದಲ್ಲಿ ಹೇಳಿದ್ದಾರೆ. 1 ನೇ ಪ್ರತಿವಾದಿ ನರಸಿಂಹಯ್ಯರವರು ವಿಲ್ ನಲ್ಲಿ 16 ನೆ ಪ್ರತಿವಾದಿ ಜಗನ್ನಾಥರವರಿಗೇ ದಾವಾ ಸ್ವತ್ತಿನ ಐಟಂ ನಂಬರ 1, 6 ಮತ್ತು 7 16 ಸೈಟಗಳನ್ನು ಮಾರಾಟ ಮಾಡಿದ್ದೇನೆ ಎಂದು ಬರೆದಿದ್ದಾರೆ ಎಂದರೆನನಗೆ ಗೊತ್ತಿಲ್ಲ. ನಿಮ್ಮ ತಂದೆ ಚಿಕ್ಕಲಿಂಗಪ್ಪರವರು 1 ನೇ ಪ್ರತಿವಾದಿ ನರಸಿಂಹಯ್ಯರವರಿಗೆ ದಿಃ15.01.1984 ರಲ್ಲಿ ಜಿ ಪಿ ಎ ಬರೆದುಕೊಟ್ಟಿದ್ದಾರೆ ಅದರಲ್ಲಿ Nominal ಆಗಿ ಮಾತ್ರ ನನ್ನ ಹೆಸರನ್ನು ತೋರಿಸಿದ್ದೇನೆ ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು OS 7084/1997 ದಾವೆಯಲ್ಲಿ ಆ ಜಿ ಪಿ ಎ ಯನ್ನು ಹಾಜರು ಪಡಿಸಿದ್ದು ಅದು ಊರ್ಜಿತವಾಗದ ಕಾರಣ ಅದು ರಾಜಿ ಆಗಿತ್ತು. ನಿಮ್ಮ ವಾರಸುದಾರರ ಅರ್ಜಿ ಪ್ರಮಾಣ ಪತ್ರದಲ್ಲಿ 1 ನೇ ಪ್ರತಿವಾದಿ ನರಸಿಂಹಯ್ಯರವರ ವಿಲ್ ನ ಬಗ್ಗೆ ತಿಳಿದಿದೇ ಎಂದು ಹೇಳಿದ್ದೀರಿ ಎಂದರೆ ಹೌದು. ಸಾಕ್ಷಿ ಮುಂದುವರೆದು ವಿಲ್ ನ ಅಂಶಗಳು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.